ದಿಃ 20.12.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃಃ 2 ಮತ್ತು 3 ನೇ ಪ್ರತಿವಾದಿ ಪರ ವಕೀಲರಿಂದಃಶ್ರೀ ಆರ್ ಸಿ ಎಸ್ ವಕೀಲರಿಂದಃ**

ದಾವಾ ಸ್ವತ್ತಿನ ಮೂಲ ಸರ್ವೆ ನಂಬರು ಮೂಲತಃ ಯಾರಿಗೆ ಸೇರಿತ್ತು ಎಂದು ನಾನು ನೋಡಿಲ್ಲ. ದಾವಾ ಸ್ವತಿನ ಮೂಲ ಸರ್ವೆ ನಂಬರು ಭಟ್ಟಚಾರ್ ಇವರಿಗೆ ಸೇರೀತ್ತು ಎಂದು ತೋರಿಸಲು ಕ್ರಯಪತ್ರ ಹಾಗೂ ಮಂಜೂರು ಪತ್ರವನ್ನು ನ್ಯಾ..ಕ್ಕೆ ಹಾಜರುಪಡಿಸಿಲ್ಲ. 3 ಸರ್ವೆ ನಂಬರು ಸೇರಿ ಸರ್ವೆ ನಂ.117 ಆಗಿರುವ ವಿಚಾರ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಮೂಲತಃ ಸ.ನಂ.2/1 ರಲ್ಲಿ 1 ಎಕರೆ 10 ಗಎಂಟೆ, ಸ.ನಂ.2/3 ರಲ್ಲಿ 1 ಎಕರೆ 8 ಗುಂಟೆ, ಸ.ನಂ.1/10 ರಲ್ಲಿ 1 ಎಕರೆ 9 ಗುಂಟೆಗಳು ಮೂರೂ ಸೇರಿ ಸ.ನಂ.117 ಆಗಿದೆ ಎಂದರೆ ನನಗೆ ಗೂತ್ತಿಲ್ಲ. ಸ.ನಂ.1/10 ಸಾವಡಿ ಶಂಕರೆಡ್ಡಿ ರವರಿಗೆ ಸೇರೀತ್ತು ಎಂದರೆ ನನಗೆ ಗೂತಿತಲ್ಲ. ಸ.ನಂ. 2/1 ರ 1 ಎಕರೆ 10 ಗುಟಂ ಗುನ್ನಾ ಇರಪರೆಡ್ಡಿ ಕುಟುಂಬಕ್ಕೆ ಸೇರಿತ್ತು ಎಂದರೆ ನನಗೆ ಗೂತ್ತಿಲ್ಲ. ಸ.ನಂ.2/3 ರ 1 ಎಕರೆ 8 ಗುಂಟೆ ಕುರುಬರು ವೆಂಕಟರಾಮಪ್ಪನಿಗೆ ಸೇರಿತ್ತು ಎಂದರೆ ನನಗೆ ಗೂತ್ತಿಲ್ಲ. ದಿಃ 15.09.1964 ರಂದು ಸರ್ಕಾರದವರು 3 ಸರ್ವೆ ನಂಬರು ಸೇರಿ ಒಟ್ಟಿಗೆ ಸ.ನಂ.117 ನ್ನು ಮಾಡಿರುತ್ತಾರೆ ಎಂದರ ನನಗೆ ಗೂತ್ತಿಲ್ಲ. ಸದರಿ 3 ಸರ್ವೆ ನಂಬರಿನಲ್ಲಿ ಎಗುವುರು ಮದ್ದಿರೆಡ್ಡಿ , ಪಾಪಿರೆಡ್ಡಿ ಗಾರಿ ಬೈಯಮ್ಮ , ಸಾವಿಡಿಂಟಿ ವೆಂಕಟಪ್ಪ ಮತ್ತು ಗುನ್ನ ತಿಮ್ಮಣ್ಣ ರವರು ಸ್ವಾಧೀನದಲ್ಲಿದ್ದರು ಎಂದರೆ ನನಗೆ ಗೂತ್ತಿಲ್ಲ. ಅವರು ಸ್ವಾಧೀನದಲ್ಲಿರುವುದರಿಂದ ಸರ್ಕಾರ ಮೇಲೆ ಹೇಳಿದವರಿಗೆ ಸರ್ಕಾರ ರೀಗ್ರಾಂಟ್ ಕೂಡಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1955 ರಲ್ಲಿ ಸರ್ಕಾರ ಇನಾಂ ಅಬಾಲೇಶನ್ ಕಾಯಿದೆ ಪ್ರಕಾರ ಮೇಲೆ ಹೇಳಿದವರಿಗೆ ಅವರವರ ಸ್ವಾಧೀನದ ಪ್ರಕಾರ ಮರು ಮಂಜೂರು ಮಾಡಿರುತ್ತಾರೆ ಎಂದರೆ ನನಗೆ ಗೂತ್ತಿಲ್ಲ. ತದನಂತರ ಸಾವಿಡಿ ವೆಂಕಟಪ್ಪ ಹಾಗೂ 2 ನೇ

ಪ್ರತಿವಾದಿ ದಿಃ 22.10.1984 ರಲ್ಲಿ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಭಾಗದ ಪ್ರಕಾರ 2 ನೇ ಪ್ರತಿವಾದಿ 1 ಎಕರೆ 9 ಗುಂಟೆ ಜಮೀನಿನಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ಸರಿಯಲ್ಲ. 1 ಎಕರೆ 9 ಗುಂಟೆಗೆ ಚಕ್ಕುಬಂದಿ ಪೂ.ಕ್ಕೆ ಸುಬ್ಬಾರೆಡ್ಡಿ , ಪ.ಕ್ಕೆ ಗುನ್ನಾ ತಿಮ್ಮಣ್ಣ , ಉ.ಕ್ಕೆ ಮಂಗಮ್ಮ , ದ.ಕ್ಕೆ ಗ್ರಾಮಠಾಣಾದಲ್ಲಿರುವ ಸ್ವತ್ತಿನಲ್ಲಿ 2 ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ , ಆದರೆ ಅಷ್ಟು ವಿಸ್ತೀರ್ಣದ ಸ್ವಾಧೀನದಲ್ಲಿಲ್ಲ ಎಂದು ನುಡಿಯುತ್ತಾರೆ. ಸ.ನಂ. 2/1 ರಲ್ಲಿ 1 ಎಕರೆ 10 ಗುಂಟೆ ಜಮೀನನ್ನು 3 ನೇ ಪ್ರತಿವಾದಿ ಕುಟುಬಂದವರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ.ನಂ.2/1 ರಲ್ಲಿ 3 ನೇ ಪ್ರವಾದಿ ಕುಟುಂಬದವರು ದಿಃ26.05.1988 ರಂದು ವಿಭಾಗ ಮಾಡಿಕೊಂಡು 1 ಎಕರೆ 10 ಗುಂಟೆ ಜಮೀನು 3 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಚಕ್ಕುಬಂದಿ ಪೂ.ಕ್ಕೆ ಶಂಕರಪ್ಪ , ಪ.ಕ್ಕೆ ಎಗುವೂರಿ ಮದ್ದಿರೆಡ್ಡಿ , ಉ.ಕ್ಕೆ ಪಾಪಿರೆಡ್ಡಿ , ದ.ಕ್ಕೆ ಗ್ರಾಮ ಠಾಣಾದಲ್ಲಿರುವ ಸ್ವತ್ತಿನಲ್ಲಿ 3 ನೇ ಪ್ರತಿವಾದಿ ಸ್ವಾಧೀನದಲ್ಲಿದ್ದಾರೆ ಎಂದರ ಸಾಕ್ಷಿ 37 ಗುಂಟೆ ಮಾತ್ರ ಸ್ವಾಧೀನದಲ್ಲಿರುತ್ತಾರೆ ಎಂದು ನುಡಿಯುತ್ತಾರೆ. 2 ಮತ್ತು 3 ನೇ ಪ್ರತಿವಾದಿಯರು ಮತ್ತು ಅವರ ಕುಟುಬಂದವರು ದಾವಾ ಸ್ವತ್ತಿನಲ್ಲಿರುತ್ತಾರೆ ಎಂದರೆ ಸಾಕ್ಷಿ ಅವರವರ ಭೂಮಿಯಲ್ಲಿ ಅವರೇ ಸ್ವಾಧೀನಲ್ಲಿದ್ದಾರೆ ಎಂದು ನುಡಿಯುತ್ತಾರೆ. ನಮಗೆ ಮಾಡಿಕೊಟ್ಟಿರುವ ಕ್ರಯದಾರರು ಯಾವತ್ತೂ ದಾವಾ ಸಸ್ವತ್ತಿನ ಸ್ವಾಧಿನದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಹಾಗೂ ಅವರಿಗೆ ಮಾರಾಟ ಮಾಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಕ್ರಯದಾರರು ಸ್ವಾಧೀನದಲ್ಲಿದ್ದಾರೆಂದು ತೋರಿಸಲು ಯಾವುದೇ ದಾಖಲೆಯನ್ನು ನಾನು ನ್ಯಾಕ್ಕೆ ಹಾಜರುಪಡಿಸಿಲ್ಲ. ನಾನು ಮತ್ತು ನಮ್ಮ ಕ್ರಯದಾರರು ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ನಾವು ಆಂಧ್ರದ ವರಂಗಲ್ ಜಿಲ್ಲೆಯ ಕೆ ಸಮುದ್ರಂ ಮಂಡಲಿಗೆ ಸೇರಿದ ಕೊಮಟರಪಲ್ಲಿ ಗ್ರಾಮದಲ್ಲಿ ವಾಸ ಇದ್ದೇವೆ

ಎಂದು ಬರೆಸಿರುತ್ತೇವೆ ಎಂದರೆ ಸರಿ . ದಾವಾ ಸ್ವತ್ತಿಗಾಗಲಿ , ನಮಗಾಗಲಿ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ಸೇರಿದ ದಾವಾ ಸ್ವತ್ತನ್ನು ಹೊಡೆದು ಹಾಕುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

*ಪಾಟೀ ಸವಾಲುಃಃ 1 ನೇ ಪ್ರತಿವಾದಿ ಪರ ವಕೀಲರಿಂದಃ ವಕೀಲರನ್ನು ಕೂಗಿಸಲಾಯಿತು, ಗೈರುಹಾಜರು , ಆ ದ್ದರಿಂದ ಪಾಟೀಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು,*

**ಮರು ವಿಚಾರಣೆ ಃಃ ಇಲ್ಲಾ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸ ಇದೆ

ಸಿಜೆ ಮತ್ತು ಜೆಎಂಎಫ್ ಸಿ. ,
ಬಾಗೇಪಲ್ಲಿ